**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಇವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ.**

**ವಿಷಯ:-** ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕಂಕಣವಾಡಿ ಗ್ರಾಮದ 700 ಎಕರೆ ಜಮೀನು ಮತ್ತು ಗುಹೇಶ್ವರ ದೇವಾಲಯ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ನಡು ಗಡ್ಡೆಯಾಗಿ ಅಲ್ಲಿ ವಾಸಿಸುತ್ತಿರುವವರಿಗೆ ಹೋಗಿ ಬರಲು ಹಾಗೂ ಬೆಳೆದ ಬೆಳೆಗಳನ್ನು ಸಾಗಿಸಲು ತೊಂದರೆಯಾಗುತ್ತಿದ್ದು ಬೋಟಿಂಗ್ ವ್ಯವಸ್ಥೆ ಕಲ್ಪಿಸುವುದು ಹಾಗೂ ನಡುಗಡ್ಡೆಯಾಗುವ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ವಿಷಯವನ್ನು ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳು, ಒಳನಾಡು ಸಾರಿಗೆ ಸಚಿವರ ಗಮನ ಸೆಳೆಯಬಯಸುತ್ತೇನೆ.

*****

**ಸರ್ಕಾರದ ಹೇಳಿಕೆ**

- ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕರ್ನಾಟಕ ಜಲಸಾರಿಗೆ ಮಂಡಳಿಯ ಒಳನಾಡು ಜಲಸಾರಿಗೆ ವಿಭಾಗದಿಂದ ರಾಜ್ಯದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನದಿ, ಹೊಳೆ, ಕೆರೆ ಜಲಾಶಯದ ಹಿನ್ನಾಡಿನ ಇತರೇ ಪ್ರದೇಶಗಳಲ್ಲಿ ಹಾಗೂ ಅತೀ ಹಿಂದುಳಿದ ಗ್ರಾಮೀಣ ಪ್ರದೇಶದಲ್ಲಿ ಜನರು ಮತ್ತು ಸರಕು, ಜಾನುವಾರು ವಾಹನಗಳನ್ನು ಸಾಗಿಸಲು 04 ಎಲ್.ಸಿ.ಟಿ. 03 ಸ್ಟೀಲ್ ಬೋಟ್ ಹಾಗೂ 03 ಒಬಿಎಂ ಬೋಟ್‌ಗಳನ್ನು ಒದಗಿಸಿ ಕಡವು ಸೇವೆಯನ್ನು ನೀಡಲಾಗುತ್ತಿದೆ.

- ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕಂಕಣವಾಡಿ ಗ್ರಾಮದ ಶ್ರೀ ಗುಹೇಶ್ವರ ದೇವಸ್ಥಾನಕ್ಕೆ ಹೋಗಿ ಬರಲು ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್‌ವಸತಿ ವಿಭಾಗ, ನಂಬರ್ - 3 ಕಡಕೋಳ ಜಮಖಂಡಿ ರವರು, 02 ಅಲ್ಯೂಮಿನಿಯಂ ಯಾಂತ್ರಿಕ ನಾವೆಗಳನ್ನು ಪೂರೈಸಿದ್ದು, ಸದರಿ ನಾವೆಗಳನ್ನು ಕಂಕಣವಾಡಿ ಗ್ರಾಮ ಪಂಚಾಯತ್ ವತಿಯಿಂದ ನಿರ್ವಹಿಸಲಾಗುತ್ತಿದೆ.

- ಉಳಿದಂತೆ, ಬಾಗಲಕೋಟೆ ಜಿಲ್ಲೆಗೆ ಸಂಬಂಧಿಸಿದಂತೆ ಕರ್ನಾಟಕ ಜಲಸಾರಿಗೆ ಮಂಡಳಿ ವತಿಯಿಂದ ಘಟಪ್ರಭಾ ನದಿ ಆಲಮಟ್ಟಿ ಹಿನ್ನೀರಿನ ಬಾಗಲಕೋಟೆ-ಕದಾಂಪುರ ಕಡವು ಸೇವೆಗೆ ಸುಸಜ್ಜಿತವಾದ ಸ್ಟೀಲ್ ಬೋಟನ್ನು ಒದಗಿಸಿ ಕಡವು ಸೇವೆಯನ್ನು ಒದಗಿಸಲಾಗುತ್ತಿದೆ.

- ಬಾಗಲಕೋಟೆ ಜಿಲ್ಲೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ 01 ಸ್ಟೀಲ್ ಬೋಟ್, 01 ಮಿನಿ ಎಲ್.ಸಿ.ಟಿ. ಮತ್ತು 03 ಒಬಿಎಂ ಫೈಬರ್ ಬೋಟ್‌ಗಳನ್ನು ಒದಗಿಸಲಾಗಿದ್ದು, ಇವುಗಳನ್ನು ಈ ಕೆಳಗಿನ ಪ್ರದೇಶಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಇಲಾಖೆಯ ಮೇಲುಸ್ತುವಾರಿ ಮೂಲಕ ನಿರ್ವಹಿಸಲಾಗುತ್ತಿದೆ. (1) ಕಟಗೂರು – ದೇವೂರು, (2) ತಮದಡ್ಡಿ – ನಂದೇಶ್ವರ, (3) ಬಬಲಾದಿ – ಮುಂಡಗನೂರು (4) ಗಿರಗಾಂವ – ಜೈನಾಪುರ ಕಡವು ಸೇವೆ. ಮತ್ತು (1) ಇಂದವಾರ – ಇಸ್ಲಾರಿಪೂರ ಕಡವು ಸೇವೆಯನ್ನು ಪಂಚಾಯಿತಿ ವತಿಯಿಂದ ನಡೆಸಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

- ಅನುದಾನ ಲಭ್ಯತೆಗೆ ಒಳಪಟ್ಟು ಗುಹೇಶ್ವರ ದೇವಾಲಯದ ನಡುಗಡ್ಡೆಯ ಸಂಪರ್ಕಕ್ಕಾಗಿ ಹೆಚ್ಚುವರಿ ಬೋಟ್ ಒದಗಿಸುವ ಕುರಿತು ಪರಿಶೀಲಿಸಲಾಗುವುದು.

• ಮಹಾ ವ್ಯವಸ್ಥಾಪಕರು, ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣ, ಬಾಗಲಕೋಟೆ ಇವರು ಗುಹೇಶ್ವರ ದೇವಾಲಯದ ನಡುಗಡ್ಡೆಯಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ವಿಷಯದ ಬಗ್ಗೆ ಈ ಕೆಳಗಿನಂತೆ ಮಾಹಿತಿಯನ್ನು ನೀಡಿರುವುದಾಗಿ ಕಂದಾಯ ಇಲಾಖೆಯು ತಿಳಿಸಿರುತ್ತದೆ.

ಜಮಖಂಡಿ ತಾಲ್ಲೂಕಿನ ಕಂಕಣವಾಡಿ ಗ್ರಾಮದ ಭೂಸ್ವಾಧೀನ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯ 524.256 ಮೀ ರಲ್ಲಿ ಬರುವ ನದಿ ದಂಡೆಯ ಜಮೀನು ಹಾಗೂ ನಡುಗಡ್ಡೆ ಜಮೀನು ಸೇರಿ ಒಟ್ಟು ಕ್ಷೇತ್ರ 1687-17 ಎ.ಗುಂ. ಒಳಗೊಂಡಿರುತ್ತದೆ. ದಿನಾಂಕ: 12.08.2022ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಚಿವ ಸಂಪುಟದ ಉಪಸಮಿತಿ ಸಭೆಯಲ್ಲಿ ಎಫ್.ಆರ್.ಎಲ್. 524.256 ಮೀಟರ್ ವ್ಯಾಪ್ತಿಯಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳನ್ನು (1) ಎಫ್.ಆರ್.ಎಲ್. 519.60 ಮೀಟರ್ ರಿಂದ 522.00 ಮೀಟರ್‌ವರೆಗೆ (2) ಎಫ್.ಆರ್.ಎಲ್. 522.00 ಮೀಟರ್‌ರಿಂದ 524.256 ಮೀಟರ್ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಿದಂತೆ ಸದರಿ ಪ್ರಕರಣವನ್ನು ಎಫ್.ಆರ್.ಎಲ್. 522.00 ಮೀಟರ್ ಮಟ್ಟದಲ್ಲಿ ಬರುವ ಕ್ಷೇತ್ರ ಪರಿಶೀಲಿಸಿ ಸಲ್ಲಿಸಲು ಭೂ ಕೋರಿಕಾ ಸಂಸ್ಥೆಯಾದ ಕಾರ್ಯನಿರ್ವಾಹಕ ಅಭಿಯಂತರರು, ಎಫ್.ಆರ್.ಎಲ್. ಅಣೆಕಟ್ಟು ವಿಭಾಗ, ಆಲಮಟ್ಟಿ ಇವರಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಷ್ಣಾ ಮೇಲ್ದಂಡೆ ಯೋಜನೆ, ಜಮಖಂಡಿ ಇವರು ಪ್ರಸ್ತಾವನೆಯನ್ನು ಮರಳಿಸಿರುತ್ತಾರೆ.

ಐಡಿಡಿ 94 ಬಿಎನ್ಎಸ್ 2023

(ಮಂಕಾಳ ಎಸ್.ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

## ಅನುಬಂಧ – 1

**ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ನಡೆಸಲ್ಪಡುವ ಬಾಗಲಕೋಟೆ ವಲಯದ ಕಡವು.**

| ಕ್ರ.ಸಂ | ಕಡವಿನ ಹೆಸರುಗಳು | ನಾವೆಯ ಸ್ವರೂಪ |
|---|---|---|
| 1. | ಬಾಗಲಕೋಟ – ಕದಾಂಪೂರ | ಸ್ಟೀಲ್ ಬೋಟ್ |

**ಕರ್ನಾಟಕ ಜಲಸಾರಿಗೆ ಮಂಡಳಿಯ ಮೇಲುಸ್ತುವಾರಿಯಲ್ಲಿ ನಡೆಸಲ್ಪಡುವ ಕಡವುಗಳು.**

| ಕ್ರ.ಸಂ | ವಲಯಗಳ / ಕಡವಿನ ಹೆಸರುಗಳು | ನಾವೆಯ ಸ್ವರೂಪ |
|---|---|---|
| 1. | ಕಟಗೂರ – ದೇವೂರ | OBM ಫೈಬರ್ ಬೋಟ್ |
| 2. | ತಮದಡ್ಡಿ – ನಂದೇಶ್ವರ್ | OBM ಫೈಬರ್ ಬೋಟ್ |
| 3. | ಬಬಲಾದ – ಮುಂಡಗನೂರ | ಮಿನಿ ಎಲ್.ಸಿ.ಟಿ |
| 4. | ಗಿರಗಾವ – ಜೈನಾಪುರ | OBM ಫೈಬರ್ ಬೋಟ್ |

**ಕರ್ನಾಟಕ ಜಲಸಾರಿಗೆ ಮಂಡಳಿಯ ಬೋಟನ್ನು, ಪಂಚಾಯತಿ ನಡೆಸಲ್ಪಡುವ ಕಡವು.**

| | | |
|---|---|---|
| 1. | ಇಂದವಾರ - ಇಸ್ಲಾರಿಪೂರ | OBM ಫೈಬರ್ ಬೋಟ್ |

ನಿರ್ದೇಶಕರು,
ಬಂದರು ಮತ್ತು ಸದಸ್ಯರು,
(ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ),
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ.

Tele No.: 08382-221494
Web site: www.karnatakaports.org
E-mail: ceokmb2019@gmail.com
directoratcp@gmail.com